# ರಾಷ್ಟ್ರೀಯ ಆರೋಗ್ಯ ಅಭಿಯಾನ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ**

**ಆನಂದರಾವ್ ವೃತ್ತ, ಬೆಂಗಳೂರು-09.**

ಕರ್ನಾಟಕ ಸರ್ಕಾರ

ನಂ.: ಎನ್‌ಹೆಚ್‌ಎಂ/ಎಸ್‌ಪಿಎಂಯು/ಹೆಚ್‌ಆರ್-ಮಾರ್ಗಸೂಚಿ/200(Part-2)2016-17 ದಿನಾಂಕ:09-11-2016

## ಮಾರ್ಗಸೂಚಿ

ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ 2016-17 ನೇ ಸಾಲಿನಲ್ಲಿ ಅನುಮೋದನೆಯಾಗಿರುವ ಎಫ್.ಎಂ.ಆರ್ ಸಂಖ್ಯೆ: ಎ.8.1.3.4.ಬಿ ಅಡಿಯಲ್ಲಿ 14 ಶಸ್ತ್ರ ಚಿಕಿತ್ಸಕರು (General Surgeon) ಹಾಗೂ ಎಫ್.ಎಂ.ಆರ್ ಸಂಖ್ಯೆ: ಎ.8.1.5.7 ಅಡಿಯಲ್ಲಿ ಒಟ್ಟು 66 ಇತರೆ ತಜ್ಞವೈದ್ಯರುಗಳ ಹುದ್ದೆಗಳನ್ನು (ಈಗಾಗಲೇ ಕೆ.ಹೆಚ್.ಎಸ್.ಆರ್.ಡಿ.ಪಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಇತರೆ ತಜ್ಞವೈದ್ಯರುಗಳ ಹುದ್ದೆಗಳನ್ನು ಒಳಗೊಂಡಂತೆ) ಪಡೆಯಲು ಅನುಮೋದನೆಯಾಗಿರುತ್ತದೆ.

ರಾಜ್ಯ ಸರ್ಕಾರದ ವತಿಯಿಂದ ಈಗಾಗಲೇ ಅನೇಕ ತಜ್ಞವೈದ್ಯರು ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಯಂ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದಾಗ್ಯೂ ತಜ್ಞವೈದ್ಯರುಗಳ ಹುದ್ದೆಗಳು ಖಾಲಿ ಉಳಿದಿರುತ್ತದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ 2016-17ನೇ ಸಾಲಿನಲ್ಲಿ ಅನುಮೋದನೆಯಾಗಿರುವ ಆರ್.ಓ.ಪಿ ಯಲ್ಲಿ ಇತರೆ ತಜ್ಞವೈದ್ಯರುಗಳ ಹುದ್ದೆಗಳನ್ನು ಖಾಲಿ ಇರುವ ಸ್ಥಳಗಳಲ್ಲಿ ಭರ್ತಿ ಮಾಡಲು ಜಿಲ್ಲಾ ಆರ್.ಓ.ಪಿ ಯಲ್ಲಿ ಈಗಾಗಲೇ ಅನುಮೋದನೆಯಾಗಿರುತ್ತದೆ.

**ತಜ್ಞರ ಸೇವೆಗಳನ್ನು ಪಡೆಯಲು ಷರತ್ತುಗಳು:**

1. ಈ ಎಫ್.ಎಂ.ಆರ್ ಸಂಖ್ಯೆ: ಎ.8.1.3.4.ಬಿ ಅಡಿಯಲ್ಲಿ 14 ಶಸ್ತ್ರ ಚಿಕಿತ್ಸಕರು (General Surgeon) ಹಾಗೂ ಎಫ್.ಎಂ.ಆರ್ ಸಂಖ್ಯೆ: ಎ.8.1.5.7 ಅಡಿಯಲ್ಲಿ ಒಟ್ಟು 66 ಇತರೆ ತಜ್ಞವೈದ್ಯರುಗಳ ಹುದ್ದೆಗಳನ್ನು (ಶಸ್ತ್ರಚಿಕಿತ್ಸಕರನ್ನು ಒಳಗೊಂಡಂತೆ) ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರು, ಅರಿವಳಿಕೆ ತಜ್ಞರು ಮತ್ತು ಮಕ್ಕಳ ತಜ್ಞರನ್ನು ಹೊರತು ಪಡಿಸಿ, ಎಲ್ಲಾ ಇತರೆ ತಜ್ಞ ವೈದ್ಯರುಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಬಹುದಾಗಿದೆ. ಒಂದು ವೇಳೆ ಸ್ತ್ರೀರೋಗ ತಜ್ಞರು, ಅರಿವಳಿಕೆ ತಜ್ಞರು ಮತ್ತು ಮಕ್ಕಳ ತಜ್ಞರ ಹುದ್ದೆಗಳು 2016-17 ನೇ ಸಾಲಿನ ಜಿಲ್ಲೆಗಳಿಗೆ ಮಂಜೂರಾಗಿರುವ ಆರ್.ಓ.ಪಿ ಗಿಂತ ಹೆಚ್ಚಿನ ಅವಶ್ಯಕತೆ ಇದ್ದಲ್ಲಿ ಮೇಲಿನ ಎಫ್.ಎಂ.ಆರ್ ಅಡಿಯಲ್ಲಿ ಜಿಲ್ಲಾ ಆರ್.ಓ.ಪಿ ಯಲ್ಲಿ ಮಂಜೂರಾಗಿರುವ ಮಿತಿಗೆ ಒಳಪಟ್ಟು ಪಡೆಯಬಹುದಾಗಿದೆ.
2. ಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ತಜ್ಞರು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿ ವಾಸವಾಗಿರತಕ್ಕದ್ದು.